ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಅಕ್ಟೋಬರ್–ನವೆಂಬರ್ ನಲ್ಲಿ ಖಂಡಿತವಾಗಿ ಸರ್ಕಾರ ಅಂತಿಮವಾಗಿ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು: ಸಾಕು ಬಿಡಿ ಹೆಗಡೆಯವರೆ, guidelines ಪ್ರಕಾರ ಕೊಟ್ಟರೆ ಮಾಡುತ್ತೇವೆಂದು ಹೇಳಿದ್ದೀರಲ್ಲಾ ಬಿಡಿ, ಜನರಲ್ ಅಗಿ ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಸುನೀಲ್ ವಿ.ಹೆಗಡೆ: ಜೋಯಿಡಾ ತಾಲ್ಲೂಕಿಗೆ ಜನಸಂಖ್ಯೆಯ ಮಿತಿಯನ್ನು ಸಡಿಲಗೊಳಿಸಬೇಕಾಗುತ್ತದೆ. ಏಕೆಂದರೆ, ಅಲ್ಲಿ 83% ಗುಡ್ಡಗಾಡು ಪ್ರದೇಶವಿರುವುದರಿಂದ ಈ ಗೈಡ್‌ಲೈನ್ಸ್‌ನಲ್ಲಿ ಸಡಿಲಿಕೆ ಕೊಟ್ಟಿಲ್ಲವೆಂದರೆ ಜೋಯಿಡಾ ತಾಲ್ಲೂಕು ಯಾವಾಗಲೂ ಪಟ್ಟಣ ಪಂಚಾಯಿತಿ ಆಗಲಿಕ್ಕೆ ಸಾಧ್ಯವಿಲ್ಲ. ದಯವಿಟ್ಟು ಜೋಯಿಡಾ ತಾಲ್ಲೂಕಿಗೆ ಹಿಂದುಳಿದ ತಾಲ್ಲೂಕಿಗೆ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು: ಅದನ್ನು ಪರಿಶೀಲಿಸಿರಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಸನ್ಮಾನ್ಯ ಸಭಾದ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಇದನ್ನು ನಾವು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

47(489) ಶ್ರೀ.ದಿನಕರ ಕೇಶವ ಶೆಟ್ಟಿ (ಕುಮಟ)

ಪೌರಾಡಳಿತ ಸಚಿವರು

ಅ) ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯತಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯವರು ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿರುತ್ತಾರೆ.

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂಸಹ, ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು 247 ಪ್ರದೇಶಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿದ್ದು, ಈ ಬಗ್ಗೆ ನಿಯಮಾನುಸಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಆರ್ಥಿಕ ಹಾಗೂ ಆಡಳಿತಾತ್ಮಕ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

ಇ) ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾರ್ಪಡಿಸಲು ಜನಸಂಖ್ಯೆಯನ್ನು ನಿಗಧಿಪಡಿಸಲಾಗಿದೆಯೇ;

ಮೇಲಿನಂತೆ

ಈ) ಹಾಗಿದ್ದಲ್ಲಿ, ಪಟ್ಟಣ ಪಂಚಾಯಿತಿಯನ್ನಾಗಿ ಮಾರ್ಪಡಿಸಲು ಎಷ್ಟು ಜನಸಂಖ್ಯೆ ಇರಬೇಕು?

ಮೇಲಿನಂತೆ

ಸಂಖ್ಯೆನಇ 7 ಎಲ್ಎಕ್ಯೂ 2009

ಶ್ರೀ ದಿನಕರ ಕೇಶವ ಶೆಟ್ಟಿ: ಮಾನ್ಯ ಅಧ್ಯಕ್ಷರೆ, ನಾನು ಮೊದಲನೇ ಬಾರಿಗೆ ಆಯ್ಕೆಯಾಗಿ ಇವತ್ತು ಪ್ರಥಮ ಬಾರಿಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಹೀಗಾಗಿ ವೈಯಕ್ತಿಕವಾಗಿ ಮತ್ತು ಇಡೀ ನಮ್ಮ ತಾಲ್ಲೂಕಿನ ಕ್ಷೇತ್ರದ ಜನತೆಯ ಪರವಾಗಿ ಸಭಾಧ್ಯಕ್ಷರಿಗೆ ಅನಂತ ಅನಂತ ಧನ್ಯವಾದಗಳನ್ನು ಈ ಒಂದು ಸಂದರ್ಭದಲ್ಲಿ ಹೇಳುವುದರ ಜೊತೆಗೆ, ಗೋಕರ್ಣ ಬಹಳ ಪವಿತ್ರವಾದ ಸ್ಥಳ. ಈ ಒಂದು ಕ್ಷೇತ್ರಕ್ಕೆ "ದಕ್ಷಿಣದ ಕಾಶಿ" ಎಂದು ಕರೆಯುವ ಪರಂಪರೆ ಇದೆ. ಕಾಶಿಗಿಂತ ಗೋಕರ್ಣವೇ ಒಂದು ಗುಲಗುಂಜಿ ಜಾಸ್ತಿ ಎನ್ನುವ ಅಭಿಪ್ರಾಯ ಇದೆ. ಇದಕ್ಕೆ ಮೂಲ ಕಾರಣ ಗೋಕರ್ಣದಲ್ಲಿ ಸಮುದ್ರವಿರುವುದರಿಂದ ಇದು ಹೆಚ್ಚು ಪವಿತ್ರವಾದ ಪ್ರದೇಶ ಎನ್ನುವುದನ್ನು ಪುರಾಣ ಪ್ರಸಿದ್ಧವಾದ ಈ ಒಂದು ಹೇಳಿಕೆಯನ್ನು ಕೇಳಿದ್ದೇನೆ. ಅಷ್ಟಲ್ಲದೇ, ಇಲ್ಲಿ ಸುಮಾರು 12,953 ಜನಸಂಖ್ಯೆ ಇದ್ದು, ಸುಮಾರು 3,500 ಕುಟುಂಬಗಳು ಇಲ್ಲಿ ವಾಸಿಸುತ್ತವೆ. ಅಷ್ಟಲ್ಲದೆ ಇಲ್ಲಿ ಪ್ರತಿನಿತ್ಯ ಸುಮಾರು ಎರಡೂವರೆಯಿಂದ ಮೂರು ಸಾವಿರ ಸಂಖ್ಯೆಯಷ್ಟು ಪ್ರವಾಸಿಗರು ಆಗಮಿಸುತ್ತಾರೆ. ಅಷ್ಟಲ್ಲದೆ, ಡಿಸೆಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಸುಮಾರು 15 ರಿಂದ 20 ಸಾವಿರದಷ್ಟು ವಿದೇಶಿಯರು ಇಲ್ಲಿಗೆ ಆಗಮಿಸುತ್ತಾರೆ. ಇದರ ಜೊತೆಗೆ ಇಲ್ಲಿ ಈ ಯಾತ್ರಾ ಸ್ಥಳವು ತುಂಬಾ ಐತಿಹಾಸಿಕ ಸ್ಥಳವಾಗಿದೆ. ಹೀಗಾಗಿ ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆನ್ನುವುದು ನನ್ನ ವೈಯಕ್ತಿಕ ಹಾಗೂ ನನ್ನ ಕ್ಷೇತ್ರದ ಜನತೆಯ ಅಭಿಪ್ರಾಯವಾಗಿದೆ. ಇಲ್ಲಿ ಸಾರ್ವಜನಿಕರ ಮೂಲಭೂತ ಸೌಕರ್ಯಗಳಾದ ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ಸಾರ್ವಜನಿಕರಿಗೆ ಉತ್ತಮ

ರಸ್ತೆ, ಉತ್ತಮ ನೈರ್ಮಲ್ಯ ವ್ಯವಸ್ಥೆ ಕಾಪಾಡಲು ಗೋಕರ್ಣ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ:– ಸನ್ಮಾನ್ಯ ಸಭಾಧ್ಯಕ್ಷರೆ, ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ. ಅಲ್ಲಿ ಜನ ಸಂಖ್ಯೆ 10,000 ಮೀರಿದೆ. ಆದ್ದರಿಂದ, ನಾವು ಮಾಡಿರುವ ಮಾನದಂಡದೊಳಗೆ ಇದು ಬರುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ನಾನು ಈಗಾಗಲೇ ಹೇಳಿದ ಹಾಗೆ ಇದರ ಬಗ್ಗೆ ಆರ್.ಡಿ.ಪಿ.ಆರ್. ನಿಂದ 247 ಪ್ರಸ್ತಾವನೆ ಬಂದಿದೆ. ಇವೆಲ್ಲವನ್ನು ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಏಕೆಂದರೆ, ಇದಕ್ಕೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದುಕೊಂಡು ಸರ್ಕಾರ ಮುಂದಿರುವ ನಿಮ್ಮ ಪ್ರಸ್ತಾವನೆಯನ್ನು ಖಂಡಿತಾ ಪರಿಶೀಲನೆ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಪಟ್ಟಣ ಪಂಚಾಯತ್‌ನ್ನು ಪುರಸಭೆಯನ್ನಾಗಿ ಮಾಡುವ ಬಗ್ಗೆ

49(479) ಶ್ರೀ.ಮಂಜು ಎ (ಅರಕಲಗೂಡು)

ಶ್ರೀ ಎಸ್. ಸುರೇಶ್ ಕುಮಾರ್(ಪೌರಾಡಳಿತ ಸಚಿವರು)

ಅ) ಅರಕಲಗೂಡು ಪಟ್ಟಣ ಪಂಚಾಯತ್‌ನ್ನು ಪುರಸಭೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಕರ್ನಾಟಕ ಪುರಸಭೆ ಕಾಯ್ದೆ 1964ರ ನಿಯಮ 3 ಮತ್ತು 9 ರನ್ವಯ ಅವಕಾಶವಿರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಉದ್ಭವಿಸುವುದಿಲ್ಲ.

ಶ್ರೀ ಎ.ಮಂಜು:– ಮಾನ್ಯ ಅಧ್ಯಕ್ಷರೆ, ಅರಕಲಗೂಡು ಪಟ್ಟಣ ಪಂಚಾಯತಿಯ ಪುರಸಭೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಕರ್ನಾಟಕ ಪುರಸಭೆ ಕಾಯ್ದೆ 1964ರ ನಿಯಮ 3 ಮತ್ತು 9ರನ್ವಯ ಅವಕಾಶವಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅರಕಲಗೂಡು ತಾಲ್ಲೂಕಿನ ಹೆಡ್‌ಕ್ವಾರ್ಟರ್ ಆಗಿದೆ. 2001ರ ಜನಗಣತಿ ಪ್ರಕಾರ ನಿಯಮ 3 ಮತ್ತು 9ರನ್ವಯ 20 ಸಾವಿರ ಜನಸಂಖ್ಯೆ ಇರಬೇಕಾಗುತ್ತದೆ. ಇಲ್ಲಿ 3 ಕಿ.ಮೀ. ಅಂತರವನ್ನು ಇದಕ್ಕೆ ಒಳಪಡಿಸಿಕೊಂಡರೆ 22 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ಪ್ರದೇಶವಾಗುತ್ತದೆ. ಇದು ಈಗಾಗಲೇ ತಾಲ್ಲೂಕು